

# ಚಂದಿರನ ಹಿಡಿದು ತಂದವನು...

■ ಗೌರಿ

**ತನ್ನ ಕನಸನ್ನು ಕೈಗೂಡಿಸಿಕೊಳ್ಳಲು ಹೊರಟ ಅನಾಥ ಹುಡುಗನೊಬ್ಬನ ಬದುಕಿನ ಸಂತಸ–ನಿರಾಸೆಯ ಗಳಿಗೆಗಳನ್ನು ಅನನ್ಯವಾಗಿ ಸೆರೆಹಿಡಿದಿರುವ ಕಿರುಚಿತ್ರವಿದು.**

ನಮಗೆ ಎಟುಕದ ಕನಸು ಯಾವಾಗಲೂ ನಮ್ಮನ್ನು ಕುಟುಕುತ್ತಿರುತ್ತದೆ. ಹಿಡಿ ಬಾ ನೋಡೋಣ ಎಂದು ಕೆಣಕುತ್ತಿರುತ್ತದೆ. ಆದರೆ ಬಹಳಸಲ ನಾವದರ ಸವಾಲನ್ನು ನಿರ್ಲಕ್ಷಿಸಿ, ನಮಗೆ ನಾವೇ ಏನೋ ಸಮಜಾಯಿಷಿ ಕೊಟ್ಟುಕೊಂಡು 'ಕಂಫರ್ಟ್ ಜೋನ್' ಒಳಗಡೆಯೇ ಬದುಕುತ್ತಿರುತ್ತೇವೆ. ಆದರೆ ಈ ಕಂಫರ್ಟ್ ಜೋನ್‌ನ ಪರಿವೆಯೇ ಇಲ್ಲದೆ ತನ್ನ ಕನಸನ್ನು ನನಸಾಗಿಸಿಕೊಳ್ಳ ಹೊರಟ ಏಳುವರ್ಷದ ಹುಡುಗನ ಕಥೆ 'ಟ್ಯೂಬ್ ಲೈಟ್ ಕಾ ಚಾಂದ್' ಕಿರುಚಿತ್ರದಲ್ಲಿದೆ.

ಅವನು ಹುಟ್ಟಿದ್ದೆಲ್ಲೋ, ಬೆಳೆದಿದ್ದೆಲ್ಲೋ, ಆ ಮಹಾನಗರದ ಗದ್ದಲದಲ್ಲಿ ಉಳಿದಿದ್ದು ಹೇಗೋ... ಎಲ್ಲರೂ ಅವನನ್ನು 'ಟ್ಯೂಬ್‌ಲೈಟ್' ಎಂದೇ ಕರೆಯುತ್ತಾರೆ. ಕಾರು, ಆಟೊಗಳ ಗಾಜು ತೊಳೆದು ಅವರು ಕೊಡುವ ಪುಡಿಗಾಸಿನಲ್ಲಿ ಏನೋ ತಿಂದ, ಎಲ್ಲೋ ಮಲಗಿ ದಿನಕಳೆಯುತ್ತಿರುವ ಮಹಾನಗರದ ಮಡಿಲ ಹುಡುಗ ಅವನು. ತಲೆಯೆತ್ತಿ ಆಕಾಶ ತನ್ನವರೆಂಬವರಾರೂ ಇಲ್ಲದ ಅವನಿಗೆ ರಾತ್ರಿ ಹೊತ್ತಲ್ಲಿ ತಲೆಯೆತ್ತಿದಾಗ ನಗುವ ಚಂದಿರನೊಬ್ಬನೇ ಪರಮಾಪ್ತ. ಆದರೆ ಆ ಆಪ್ತನೋ ಬಲು ಬಿಂಕದವನು. ಎಷ್ಟು ಕೈಮಾಡಿ ಕರೆದರೂ ಬರಲೊಲ್ಲ. ಜಿಗಿದರೂ ಎಟುಕಲೊಲ್ಲ. ನಗರದ ಎತ್ತರೆತ್ತರ ಕಟ್ಟಡದ ನೆತ್ತಿ ಮೇಲೆ ನಿಂತು, ಅದೇ ಮೇಲೆ ಅಟ್ಟಣಿಗೆ ಇಟ್ಟು ಜಿಗಿದರೂ ಸಿಗದೆ ನಗುವ ಚಂದಿರನ ಕೈಗೆಟುಕುವ ಹಾಗೆ ಮಾಡಬೇಕು ಎಂಬುದೊಂದೇ ಆ ಪುಟ್ಟ ಬಾಲಕನ ಹಂಬಲ.

ಚಂದಿರನ ಹಿಡಿದು ತರಬೇಕೆಂಬ ತನ್ನ ಕನಸನ್ನು ನನಸಾಗಿಸಿಕೊಳ್ಳಲು ಆ ಹುಡುಗ ಒಂದು ದಾರಿಯನ್ನು ಕಂಡುಕೊಳ್ಳುತ್ತಾನೆ. ಯಾವುದು ಆ ದಾರಿ? ಅದರಿಂದ ಘಟಿಸುವ ಅನಾಹುತಗಳೇನು ಎಂಬುದೇ ಈ ಕಿರುಚಿತ್ರವನ್ನು ಮುನ್ನಡೆಸಿಕೊಂಡು ಹೋಗುತ್ತದೆ.

ಈ ಕಿರುಚಿತ್ರದಲ್ಲಿ ಕಾವ್ಯದ ನಡಿಗೆಯಿದೆ. ಮುಗ್ಧ ಲೋಕದ ಬೆರಗಿದೆ. ಸರಿ ತಪ್ಪುಗಳ ಆಚೆಗೆ ಹರಡಿರುವ ಮನುಷ್ಯಸಹಜವಾದ ಆಕಾಂಕ್ಷೆಗಳ ಜಗತ್ತಿದೆ. ಮಾತುಗಳೇ ಆಡದ ಹುಡುಗ ತನ್ನ ನಡೆಗಳಿಂದಲೇ ಮಾತಿಗೆ ಮೀರಿದ ಕಥನವನ್ನು ಕಟ್ಟುತ್ತ ಹೋಗುತ್ತಾನೆ.

ಸಾಮಾನ್ಯವಾಗಿ ಇಂಥ ಭಾವುಕ ಕಥನಗಳಲ್ಲಿ ಭಾವುಕ ಜಗತ್ತಿನೆದುರು ವ್ಯಾವಹಾರಿಕ ಸತ್ಯಗಳನ್ನು ಸೋಲಿಸಿ ಹಿನ್ನೆಲೆಗೆ ಸರಿಸಿಬಿಡುತ್ತಾರೆ. ಕಥೆಯ ನಾಯಕ ಮಾಡಿದ ತಪ್ಪುಗಳೂ ಸಮರ್ಥನೀಯವಾಗಿಬಿಡುತ್ತವೆ. ಆದರೆ ಇಲ್ಲಿ ನಿರ್ದೇಶಕರು ವ್ಯಾವಹಾರಿಕ ಜಗತ್ತಿನ ಸತ್ಯಗಳು ಮತ್ತು ಅದರ ಬೇಲಿಗಳನ್ನ ಹಾರಿ ಹರಡುವ ಭಾವುಕ ಜಗತ್ತಿನ ಸತ್ಯಗಳನ್ನು ಮುಖಾಮುಖಿಯಾಗಿಸುತ್ತಾರೆ. ಆದರೆ ಯಾವುದನ್ನೂ ಗೆಲ್ಲಿಸುವುದಿಲ್ಲ. ಯಾವುದನ್ನು ಸೋಲಿಸುವುದೂ ಇಲ್ಲ. ಅದು ಅವರ ಉದ್ದೇಶವೇ ಅಲ್ಲ. ವಾಸ್ತವ ಜಗತ್ತಿನ ನಿರ್ಬಂಧಗಳ ನಡುವೆಯೇ ಒಬ್ಬ ಹುಡುಗ, ಅಸಂಗತ ಅನಿಸುವ ರೀತಿಯಲ್ಲಿ ತನ್ನ ಕನಸನ್ನು ಸಾಕಾರ ಮಾಡಿಕೊಳ್ಳುವ ದಿವ್ಯ ಗಳಿಗೆಯನ್ನು ಹಿಡಿದಿಡುವುದೇ ಈ ಕಿರುಚಿತ್ರದ ಉದ್ದೇಶ. ಅದರ ಮೂಲಕ ಅವರು ಸೂಚ್ಯವಾಗಿ ನಮ್ಮ ಸಮಾಜದಲ್ಲಿನ ಅಸಮಾನತೆಗಳನ್ನು, ಅದರಿಂದಾಗುವ ಅನ್ಯಾಯಗಳನ್ನು ಮತ್ತು ಅದಕ್ಕೆ ನಮ್ಮ ಮನಸ್ಸು ಜಡ್ಡುಗಟ್ಟಿರುವ ರೀತಿಯನ್ನೂ ಕಾಣಿಸುತ್ತಾರೆ.

ತನ್ನ ಅಸಾಮಾನ್ಯ ಕನಸನ್ನು ಕೈಗೂಡಿಸಿಕೊಳ್ಳಲು ಹೊರಟಿರುವ ಹುಡುಗ ಕೊನೆಗೆ ಲೋಕದ ಬಲ್ಬ್ ಕಳ್ಳನಾಗುತ್ತಾನೆ. ಈ ಪರಿಸ್ಥಿತಿಗೆ ಕಾರಣ ಯಾರು? ನಾವು ಕಟ್ಟಿರುವ ಸಮಾಜದ ರಚನೆಯೇ ಅಂಥ ಹುಡುಗರನ್ನು ಹುಟ್ಟುಹಾಕುತ್ತಿದೆಯೇ? ಇತ್ಯಾದಿ ಪ್ರಶ್ನೆಗಳನ್ನು ಈ ಕಿರುಚಿತ್ರ ಹುಟ್ಟುಹಾಕುತ್ತದೆ.



| | |
|---|---|
| ಹೆಸರು: | ಟ್ಯೂಬ್‌ಲೈಟ್ ಕಾ ಚಾಂದ್ |
| ನಿರ್ದೇಶನ: | ಶ್ಲೋಕ್ ಶರ್ಮಾ |
| ನಿರ್ಮಾಣ: | ಅನುರಾಗ್ ಕಶ್ಯಪ್ |
| ನಟ: | ಮೋಹದ್ ಶರೀಕ್ |
| ಛಾಯಾಗ್ರಹಣ: | ಕಲ್ಪೇಶ್ |
| ಸಂಕಲನ: | ಶ್ವೇತಾ |

ಈ ಕಿರುಚಿತ್ರ ವೀಕ್ಷಣೆಗೆ bit.ly/2NUIUX3 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.